ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 6, January-February 2026, Pp. 70-78
Bi-Monthly, Peer-Reviewed, Open Access, Indexed Journal

ISSN: 2583-3510
SIRDF JOURNALS
editor@srujani.in
www.srujani.in

# ಕಾಗಿನೆಲೆ ಶಾಸನಗಳ ಸಾಂಸ್ಕೃತಿಕ ಅಧ್ಯಯನ

**ಡಾ. ಜಯದೇವ ಸಿರಳ್ಳಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ (ಗಾಂಧಿಪುರ)

***Abstract:***

*ಉಜ್ವಲವಾದ ಇತಿಹಾಸವನ್ನು ಹೊಂದಿದ ಭಾರತದಲ್ಲಿ ಕರ್ನಾಟಕಕ್ಕೆ ತನ್ನದೇ ಆದ ಒಂದು ವಿಶೇಷವಾದ ಸ್ಥಾನವಿದೆ. ಇಂತಹ ಕರ್ನಾಟಕವನ್ನು ಅನೇಕ ಅರಸು ಮನೆತನಗಳು ಆಳ್ವಿಕೆ ಮಾಡಿವೆ. ಅವುಗಳಲ್ಲಿ ಪ್ರಮುಖವಾದ ಅರಸು ಮನೆತನಗಳೆಂದರೆ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ಯಾದವರು ಮತ್ತು ವಿಜಯನಗರ ಅರಸರು ಇವರಲ್ಲದೆ ಅನೇಕ ಸಾಮಂತ ಅರಸು ಮನೆತನಗಳು ಸಹ ಇಲ್ಲಿ ಆಳ್ವಿಕೆ ಮಾಡಿರುವ ಬಗ್ಗೆ ಅನೇಕ ಆಧಾರಗಳು ದೊರೆಯುತ್ತವೆ. ಪ್ರಾಚೀನ ಕರ್ನಾಟಕದ ವಿವಿಧ ಭಾಗಗಳು ಪ್ರತ್ಯೇಕ ಹೆಸರುಗಳಿಂದ ಕರೆಯಲ್ಪಡುತ್ತಿದ್ದವು. ಅವುಗಳಲ್ಲಿ ದಖನ್ನಿನ ಪಶ್ಚಿಮ ಹಾಗೂ ಮೈಸೂರಿನ ಉತ್ತರ ಭಾಗವು ಕುಂತಳ ಎಂದು ಪ್ರಸಿದ್ಧಿಯಾಗಿತ್ತು. ಈ ಕುಂತಳ ದೇಶದಲ್ಲಿ ತುಂಗಭದ್ರೆಯ ಉತ್ತರ ದಿಕ್ಕಿಗೆ ಇರುವ ಭಾಗಕ್ಕೆ 'ಬನವಾಸಿ ನಾಡು' ಎಂದು ಕರೆಯುತ್ತಿದ್ದರು. ವಿಶಾಲವಾದ ಈ ನಾಡಿನಲ್ಲಿ ಕಾಗಿನೆಲೆಯು ಸಹ ಒಂದು ಪ್ರಮುಖ ಪ್ರದೇಶವಾಗಿತ್ತು. ಕಾಗಿನೆಲೆ ಕ್ಷೇತ್ರದಲ್ಲಿ ಕಲ್ಯಾಣಿ ಚಾಲುಕ್ಯರು ಮತ್ತು ಯಾದವ ಅರಸರ ಕಾಲಕ್ಕೆ ಸೇರಿದ ಶಾಸನಗಳು ಮತ್ತು ವೀರಗಲ್ಲು ಶಾಸನಗಳು ದೊರೆತಿವೆ. ಈ ಶಾಸನಗಳನ್ನು ಅವಲೋಕಿಸಿ ಕಾಗಿನೆಲೆಯ ಸಾಂಸ್ಕೃತಿಕ ಇತಿಹಾಸವನ್ನು ತಿಳಿಸುವ ಪ್ರಮುಖ ಉದ್ದೇಶ ಈ ಲೇಖನದ್ದಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಶಾಸನಗಳು, ಕಾಗಿನೆಲೆ, ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ಶಿಕ್ಷಣ ವ್ಯವಸ್ಥೆ.*

## ಪೀಠಿಕೆ

ಹಾವೇರಿಯಿಂದ ದಕ್ಷಿಣಕ್ಕೆ 14 ಕಿ.ಮೀ ದೂರದಲ್ಲಿರುವ ಕಾಗಿನೆಲೆ ಬ್ಯಾಡಗಿ ತಾಲೂಕಿನ ಐತಿಹಾಸಿಕ ಸ್ಥಳವಾಗಿದೆ. ಕಾಗಿನೆಲೆಯು ಪ್ರಾಚೀನ ಕಾಲದಲ್ಲಿ 'ಬನವಾಸಿ ಪನ್ನಿರ್ಚ್ಛಾಸಿರ' ನಾಡಿನಲ್ಲಿ 'ಬಾಸವೂರು–140' ವಿಭಾಗದಲ್ಲಿ 12 ಗ್ರಾಮಗಳನ್ನು ಒಳಗೊಂಡ ಮಹತ್ವಪೂರ್ಣ ರಾಜಕೀಯ ಕ್ಷೇತ್ರವಾಗಿತ್ತು. ಕರ್ನಾಟಕದಲ್ಲಿ ಮೇಲಿಂದ ಮೇಲೆ ರಾಜ್ಯಾಡಳಿತ ನಡೆಸಿದ ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಹೊಯ್ಸಳ, ದೇವಗಿರಿ ಯಾದವರ ಕಾಲದಲ್ಲಿ ತನ್ನ ವೈಭವವನ್ನು ಮೆರೆಯಿತು. ಈ ಕ್ಷೇತ್ರವು ಆದಿಕೇಶವನ ಪವಿತ್ರಸ್ಥಾನ, ಕನಕದಾಸರ ಕರ್ಮಭೂಮಿ ಮತ್ತು ತಪಸ್ಸಿನ ತಾಣವಾಗಿದ್ದು, ಈಗ ಕನಕದಾಸರ ಮಂದಿರ ಕನಕ ಪೀಠವು ಅಲ್ಲಿ ರೂಪಗೊಂಡು ಪ್ರವಾಸಿಗರಿಗೆ ನೋಡಬೇಕಾದ ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ. ಇಲ್ಲಿ ಲಕ್ಷ್ಮೀನರಸಿಂಹ, ಆದಿಕೇಶವ, ಸಂಗಮೇಶ್ವರ, ಕಾಳಹಸ್ತೇಶ್ವರ, ವೀರಭದ್ರ, ಕಲ್ಮೇಶ್ವರ ಮುಂತಾದ ಐತಿಹಾಸಿಕ ದೇವಾಲಯಗಳು ಕಂಡು ಬರುತ್ತವೆ. ಈ

***Please cite this article as:*** ಜಯದೇವ ಸಿರಳ್ಳಿ. (2026). ಕಾಗಿನೆಲೆ ಶಾಸನಗಳ ಸಾಂಸ್ಕೃತಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(6), 70–78

ಪ್ರಸ್ತುತ ಲೇಖನವನ್ನು ಕಾಗಿನೆಲೆ ಭಾಗದಲ್ಲಿ ಲಭ್ಯವಿರುವ ಶಾಸನಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

**ರಾಜಕೀಯ ವ್ಯವಸ್ಥೆ**

ಪ್ರಾಚೀನ ಕರ್ನಾಟಕದಲ್ಲಿ ದಖನ್ನಿನ ಪಶ್ಚಿಮ ಹಾಗೂ ಮೈಸೂರಿನ ಉತ್ತರ ಭಾಗವು ಕುಂತಳ ಎಂದು ಪ್ರಸಿದ್ಧಿಯಾಗಿತ್ತು. ಈ ಕುಂತಳ ದೇಶದಲ್ಲಿ ತುಂಗಭದ್ರೆಯ ಉತ್ತರ ದಿಕ್ಕಿಗೆ ಇರುವ ಭಾಗಕ್ಕೆ 'ಬನವಾಸಿ ನಾಡು' ಎಂದು ಕರೆಯುತ್ತಿದ್ದರು. ವಿಶಾಲವಾದ ಈ ನಾಡಿನಲ್ಲಿ ಹಾವೇರಿ ಜಿಲ್ಲೆಯು ಸಹ ಒಂದು ಪ್ರಮುಖ ಪ್ರದೇಶವಾಗಿತ್ತು. ಈ ಜಿಲ್ಲೆಯು ಪ್ರಾಚೀನ ಕಾಲದಲ್ಲಿ ವಿವಿಧ ಆಡಳಿತ ವಿಭಾಗಗಳಲ್ಲಿ ಹಂಚಲ್ಪಟ್ಟಿತ್ತು. ಬಾಸವೂರು–140, ನಾಗರಖಂಡ–70, ಬೆಳಹುಗೆ–70, ಕಾಗಿನೆಲೆ–12, ಹೊನ್ನವರ್ತಿ–12, ಹಾನಗಲ್ಲ–500 ಮುಂತಾದವುಗಳು ಪ್ರಮುಖವಾಗಿವೆ. ಅಧ್ಯಯನಕ್ಕೆ ಒಳಪಡಿಸಿದ ಕಾಗಿನೆಲೆ ಕ್ಷೇತ್ರದಲ್ಲಿ ಕಲ್ಯಾಣಿ ಚಾಲುಕ್ಯರು ಮತ್ತು ಯಾದವ ಅರಸರ ಕಾಲಕ್ಕೆ ಸೇರಿದ ಶಾಸನಗಳು ದೊರೆತಿವೆ. ಶಾಸನಗಳನ್ನು ಅವಲೋಕಿಸಿ ಸಂಕ್ಷೀಪ್ತವಾದ ರಾಜಕೀಯ ಇತಿಹಾಸವನ್ನು ತಿಳಿಸುವ ಉದ್ದೇಶವನ್ನು ಪ್ರಸ್ತುತ ಈ ಲೇಖನ ಒಳಗೊಂಡಿದೆ.

ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳು ಹಾವೇರಿ ಜಿಲ್ಲೆಯ ಹಿರೇಬಿದರಿ, ಗಳಗನಾಥ ಮುಂತಾದ ಸ್ಥಳಗಳಲ್ಲಿ ದೊರೆತಿದ್ದರಿಂದ ಕಾಗಿನೆಲೆಯು ಇವರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ಹೇಳಬಹುದು.

**ಕಲ್ಯಾಣಿ ಚಾಲುಕ್ಯರು:**

ಕಲ್ಯಾಣಿ ಚಾಲುಕ್ಯರು ಸು. 10 ರಿಂದ 12 ನೇ ಶತಮಾನದಲ್ಲಿ ಕರ್ನಾಟಕ ಚರಿತ್ರೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದರು. "ರಾಷ್ಟ್ರಕೂಟರ ಸಾಮಂತನಾಗಿದ್ದ ಚಾಲುಕ್ಯವಂಶದ ನಾಯಕನಾದ ಇಮ್ಮಡಿ ತೈಲಪನು ರಾಷ್ಟ್ರಕೂಟರ ದೊರೆ ಎರಡನೆಯ ಕರ್ಕನನ್ನು ಕ್ರಿ.ಶ 973 ರಲ್ಲಿ ಪರಾಭವಗೊಳಿಸಿ ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಖೇಟವನ್ನು ವಶಪಡಿಸಿಕೊಂಡು ಸ್ವತಂತ್ರ ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದನು."[1]

ಸುಮಾರು 200 ವರ್ಷಗಳ ಕಾಲ ರಾಜ್ಯಭಾರ ಮಾಡಿದ ಈ ಮನೆತನ ಪೂರ್ವದಲ್ಲಿ ಬಾದಾಮಿ ಚಾಲುಕ್ಯರು ತಂದು ಕೊಟ್ಟ ಹಿರಿಮೆಯನ್ನು ಕಲ್ಯಾಣದ ಚಾಲುಕ್ಯರು ಉಜ್ವಲವಾದ ರೀತಿಯಲ್ಲಿ ಮುಂದುವರಿಸಿಕೊಂಡು ಬಂದರು. ಈ ಕ್ಷೇತ್ರದಲ್ಲಿ ಈವರೆಗೂ ದೊರೆತ ಶಾಸನಗಳಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಶಾಸನಗಳು ಹೆಚ್ಚು ಕಂಡು ಬರುತ್ತವೆ. ಈ ಮನೆತನದ ಪ್ರಥಮ ಅರಸನಾದ ಇಮ್ಮಡಿ ತೈಲಪನ ನಂತರ ಸತ್ಯಾಶ್ರಯ ಮತ್ತು 5ನೆಯ ವಿಕ್ರಮಾದಿತ್ಯನು ಆಳ್ವಿಕೆ ನಡೆಸಿದರು. ಆದರೆ ಈ ಕ್ಷೇತ್ರವು ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂಬ ಸ್ಪಷ್ಟ ಉಲ್ಲೇಖ ದೊರೆಯುವುದು ಎರಡನೆಯ ಜಯಸಿಂಹನ ಶಾಸನದಿಂದ. "ಕಾಗಿನೆಲೆಯ ಈ ಶಾಸನವು ಎರಡನೆಯ ಜಯಸಿಂಹನಿಗೆ ಇರುವ ಶ್ರೀ ಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಚಾಲುಕ್ಯಾಭರಣಂ, ಜಗದೇಕಮಲ್ಲ ಎಂಬ ಬಿರುದುಗಳನ್ನು ತಿಳಿಸುವುದು ಮತ್ತು ದೇವಾಲಯದಲ್ಲಿ ಸಂಗೀತ, ಶಿಕ್ಷಣ ಮತ್ತು ಇನ್ನಿತರ ಕಾರ್ಯಕ್ರಮಗಳು ನಡೆಯಲು ಧಾನ ಮಾಡಿದ್ದನ್ನು ಕುರಿತು ತಿಳಿಸುವುದು."[2]

ಎರಡನೆಯ ಜಯಸಿಂಹನ ನಂತರ ಒಂದನೆಯ ಸೋಮೇಶ್ವರನು (ಕ್ರಿ.ಶ 1043–1068) ಆಳ್ವಿಕೆಗೆ ಬಂದನು. ಇವನ ನಂತರ ಎರಡನೆಯ ಸೋಮೇಶ್ವರನು ಆಳ್ವಿಕೆಗೆ ಬಂದನು. ಕ್ರಿ.ಶ 1072 ನೇಯ ಕಾಗಿನೆಲೆಯ ಶಾಸನವು[3] ಎರಡನೆಯ ಸೋಮೇಶ್ವರನ ಆಳ್ವಿಕೆಗೆ ಸಂಬಂದಿಸಿದ್ದಾಗಿದ್ದು, ಈ ಶಾಸನವು ಅವನ ಬಿರುದು ಮತ್ತು ಆಳ್ವಿಕೆಯನ್ನು ಕುರಿತು ತಿಳಿಸುವುದು. ಕಾಲಾಂತರದಲ್ಲಿ ಇಮ್ಮಡಿ ಸೋಮೇಶ್ವರನು ವಿಷಯ ಲೋಲಪನಾಗಿ ರಾಜ್ಯಭಾರವನ್ನು ಉಪೇಕ್ಷಿಸಿದನೆಂದು ತಿಳಿದುಬರುತ್ತದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ

ಎರಡನೆಯ ಸೋಮೇಶ್ವರನ ನಂತರ ಆರನೆಯ ವಿಕ್ರಮಾದಿತ್ಯನು ಕ್ರಿ.ಶ 1076 ರಲ್ಲಿ ಅಧಿಕಾರಕ್ಕೆ ಬಂದನು.

ಆರನೆಯ ವಿಕ್ರಮಾದಿತ್ಯನು ಚಾಲುಕ್ಯ ಅರಸರಲ್ಲಿಯೇ ಅತ್ಯಂತ ದಕ್ಷ ಆಡಳಿತಗಾರನೂ, ಮಹಾವಿಜೇತನೂ, ಸಾಹಿತ್ಯ, ವಿದ್ಯೆ ಹಾಗೂ ಕಲಾ ಪೋಷಕನೂ ಆಗಿದ್ದನು. ಈ ಚಾಲುಕ್ಯ ಸಾಮ್ರಾಟನು ತನ್ನ ಸಿಂಹಾಸನವೇರಿದ ವರ್ಷದಲ್ಲಿಯೇ 'ಚಾಲುಕ್ಯ ವಿಕ್ರಮಶಕೆ'ಯನ್ನು ಪ್ರಾರಭಿಸಿದನು. ಈತನು 'ತ್ರಿಭುವನಮಲ್ಲ' 'ವಿಕ್ರಮಾಂಕ' ಎಂಬ ಬಿರುದುಗಳನ್ನು ಧರಿಸಿದ್ದನು. ಈತನ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಕರ್ನಾಟಕವು ಶಾಂತಿ ಸುಖ ಸಮೃದ್ಧಿಗಳಿಂದ ಕೂಡಿತ್ತು.

ಇಂತಹ ಒಬ್ಬ ಸಾಮ್ರಾಟನ ಆಳ್ವಿಕೆಗೆ ಈ ಕ್ಷೇತ್ರವು ಒಳಪಟ್ಟಿತ್ತು ಎಂಬುದಕ್ಕೆ ಈತನ ಕಾಲದ ಶಾಸನವೇ ಆಧಾರವಾಗಿದೆ. ಕ್ರಿ.ಶ 1121 ರ ಕಾಗಿನೆಲೆಯ ಶಾಸನವು[4] ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸಂಬಂಧಿಸಿದ್ದಾಗಿದ್ದು, ಉಪವಿಭಾಗವಾದ ಬಾಸವೂರು–140 ನ್ನು ಮನ್ನೆಯ ಕಲಿಯಮರಸನು ಆಳುತ್ತಿದ್ದನು. ಆಗ ಕಾಗಿನೆಲೆ–12 ಪ್ರದೇಶವನ್ನು ಬಮ್ಮಗಾವುಂಡ ಮತ್ತು ಚೀಲಗಾವುಂಡರು ನೋಡಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ. ಆರನೆಯ ವಿಕ್ರಮಾದಿತ್ಯನ ನಂತರ 3ನೇ ಸೋಮೇಶ್ವರ, ಇಮ್ಮಡಿ ಜಗದೇಕಮಲ್ಲರು ಆಳಿದರು.

ಈ ಮೇಲಿನ ಶಾಸನಗಳ ಆಧಾರದಿಂದ ಈ ಕ್ಷೇತ್ರವು ಸುಮಾರು ಎರಡು ಶತಮಾನಗಳ ಕಾಲ ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದು.

**ಕಲ್ಯಾಣದ ಕಲಚೂರ್ಯರು:**

ಕಲ್ಯಾಣದ ಕಲಚೂರ್ಯರು ಕಲ್ಯಾಣ ಚಾಲುಕ್ಯರನ್ನು ಮೂಲೆಗೊತ್ತಿ ಚಾಲುಕ್ಯ ಸಾಮ್ರಾಜ್ಯವನ್ನೇ ಕ್ರಿ.ಶ 1162 ರಿಂದ 1184 ರ ವರೆಗೆ ಸ್ವತಂತ್ರವಾಗಿ ಆಳಿದರು. ಕಲಚೂರ್ಯರು ಮೊದಲು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದು, ಮಂಗಳವಾಡದಿಂದ ಆಳುತ್ತಿದ್ದರು. ಈ ವಂಶದ ಸಾಮಂತರಸನಾದ ಪೆರ್ಮಾಡಿಯ ಮಗನೆ ಬಿಜ್ಜಳ. ಈತನ ಆಳ್ವಿಕೆಗೆ ಸಂಬಂಧಿಸಿದಂತೆ ಅಬಲೂರಿನಲ್ಲಿ ಶಾಸನ ಲಭ್ಯವಿದ್ದುದರಿಂದ ಈ ಪ್ರದೇಶವು ಅವರ ಆಡಳಿತಕ್ಕೆ ಒಳಪಟ್ಟಿತ್ತೆಂದು ಹೇಳಬಹುದು.

**ದೇವಗಿರಿ ಯಾದವರು:**

ದೇವಗಿರಿ ಯಾದವರು ಮೊದಲು ಕಲ್ಯಾಣದ ಚಾಲುಕ್ಯರ ಮಾಂಡಲೀಕರಾಗಿದ್ದರು. ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರನ ಮಾಂಡಲಿಕನಾಗಿದ್ದ ಐದನೆಯ ಭಿಲ್ಲಮನು ಚಾಲುಕ್ಯರ ಅವನತಿಯ ಲಾಭ ಪಡೆದು ಕ್ರಿ.ಶ 1187 ರಲ್ಲಿ ಸ್ವತಂತ್ರ ದೊರೆಯಾದನು. ಈತನು ದೇವಗಿರಿ ನಗರವನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಯಾದವ ದೊರೆ ಐದನೆಯ ಭಿಲ್ಲಮನು ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಜೊತೆ ಹೋರಾಡಿ ಪರಾಭವ ಹೊಂದಿ 1193 ರಲ್ಲಿ ಮಡಿದನು.

ಐದನೆಯ ಭಿಲ್ಲಮನ ನಂತರ ಅವನ ಮಗ ಜೈತುಗಿ ಆಳ್ವಿಕೆ ಮಾಡಿದನು. ಈತನ ತರುವಾಯ ಇವನ ಮಗನಾದ ಸಿಂಘಣ ಕ್ರಿ.ಶ 1200 ರಲ್ಲಿ ಆಳ್ವಿಕೆಗೆ ಬಂದನು. ಇವನ ಆಳ್ವಿಕೆಯ ಕಾಲದ ವೀರಗಲ್ಲು ಶಾಸನವು ಕಾಗಿನೆಲೆಯಲ್ಲಿ ದೊರೆತಿದೆ. "ಈ ಶಾಸನದಲ್ಲಿ ಸಿಂಘಣನು 'ಯಾದವ ನಾರಾಯಣ' ಎಂದು ಉಲ್ಲೇಖಿಸಲ್ಪಟ್ಟಿದ್ದಾನೆ."[5]

ನಂತರ ಜೈತುಗಿಯ ಮಗ ಕೃಷ್ಣ, ಕೃಷ್ಣನ ತರುವಾಯ ಅವನ ಸಹೋದರ ಮಹದೇವನು ಆಡಳಿತ ನಡೆಸಿದನು. ಮಹದೇವನ ನಂತರ ಕ್ರಿ.ಶ 1221 ರಲ್ಲಿ ರಾಮಚಂದ್ರನು ಆಳ್ವಿಕೆಗೆ ಬಂದನು. ಇವನಿಗೆ ಸಂಭಂದಿಸಿದ ಶಾಸನ ಕಾಗಿನೆಲೆಯಲ್ಲಿ ದೊರೆತಿದೆ. "ಈ ಶಾಸನದಲ್ಲಿ ಅವನು 'ಯಾದವ ನಾರಾಯಣ' 'ಭುಜಬಳ ಪ್ರವುಡ ಪ್ರತಾಪ ಚಕ್ರವರ್ತಿ' ಎಂದು ಉಲ್ಲೇಖಿಸಲ್ಪಟ್ಟಿದ್ದಾನೆ"[6]

ಈ ಶಾಸನಗಳ ಉಲ್ಲೇಖದಿಂದ ಪ್ರಸ್ತುತ ಕ್ಷೇತ್ರವು ದೇವಗಿರಿ ಯಾದವರ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿಯುವುದು.

**ವಿಜಯನಗರ ಸಾಮ್ರಾಜ್ಯ:**

ವಿಜಯನಗರ ಸಾಮ್ರಾಜ್ಯವು ಕರ್ನಾಟಕದ ಪ್ರಮುಖ ಸಾಮ್ರಾಜ್ಯಗಳಲ್ಲಿ ಒಂದಾಗಿದೆ. ಇದು ಹಕ್ಕ–ಬುಕ್ಕ ರಿಂದ ಕ್ರಿ.ಶ 1336 ರಲ್ಲಿ ಸ್ಥಾಪನೆಯಾಗಿ ಸುಮಾರು ಮೂರು ಶತಮಾನಗಳ ಕಾಲ ಆಳ್ವಿಕೆ ಮಾಡಿತು. **"**ಕಾಗಿನೆಲೆಯನ್ನು 14ನೆಯ ಶತಮಾನದಲ್ಲಿ ಬಹುಮನಿ ಸುಲ್ತಾನರು ವಿಜಯನಗರ ಬುಕ್ಕನಿಂದ ಪಡೆದಂತೆ ಉಲ್ಲೇಖವಿದೆ. ವಿಜಯನಗರದ ರಕ್ಕಸತಂಗಡಿಯ ಕಾಳಗದವರೆಗೂ ವಿಜಯನಗರದ ಮಾಂಡಲೀಕತ್ವ ಪಡೆದ ಕಾಗಿನೆಲೆ ಒಂದು ಪರಗಣೆಯೆನಿಸಿತ್ತು. ಈ ಅವಧಿಯಲ್ಲಿಯೇ ದಾಸ ಶ್ರೇಷ್ಠರೆನಿಸಿದ ಕನಕದಾಸರು ವಿಜಯನಗರದ ಸಹಾಯಕರಾಗಿ ಅಧಿಕಾರ ವಹಿಸಿದ್ದು ಗಮನಾರ್ಹವಾದುದು.**"**[7] ಈ ಉಲ್ಲೇಖದಿಂದ ಪ್ರಸ್ತುತ ಅಧ್ಯಯನದ ಕ್ಷೇತ್ರಗಳು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿದು ಬರುವುದು.

ಹೀಗೆ ವಿವಿಧ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟು ಕಾಗಿನೆಲೆ–12 ಎಂದು ಉಪವಿಭಾಗವಾಗಿ, 12 ಗ್ರಾಮಗಳ ಆಡಳಿತದ ಮುಖ್ಯ ಗ್ರಾಮವಾಗಿತ್ತು. **"**ಕಾಗಿನೆಲೆಯೆಂಬುದು ಹಂನೆರಡೆನಿಪ ಪೆರಿಯ ಪೆಸರಿಂದೆಸೆಗುಂ**"**[8] ಎಂದು ವರ್ಣಿತವಾಗಿದೆ.

ಹೀಗೆ ದೊರೆತ ಶಾಸನಗಳ ಆಧಾರದ ಮೇಲಿಂದ ಕಾಗಿನೆಲೆಯ ರಾಜಕೀಯ ವ್ಯವಸ್ಥೆಯನ್ನು ತಿಳಿಯಬಹುದು.

**ಸಾಮಾಜಿಕ ವ್ಯವಸ್ಥೆ**

ಮಾನವನ ಸರ್ವತೋಮುಖ ಅಭಿವೃದ್ಧಿಗೆ ಸಾಮಾಜಿಕ ಸಂಘಟನೆಯೇ ಮುಖ್ಯ ಕಾರಣವಾಗಿದೆ. ಇಲ್ಲಿ ಜನತೆಯ ಪರಸ್ಪರ ಸಂಬಂಧವುಳ್ಳ ಸುವ್ಯವಸ್ಥೆಯ ಸಮೂಹವನ್ನು ಸಮಾಜವೆನ್ನಬಹುದು. ಇದರಲ್ಲಿ ವ್ಯಕ್ತಿ ಮತ್ತು ಸಮಾಜದ ಏಳಿಗೆಗೆ ಅವಕಾಶವಿರುತ್ತದೆ. ವೈಯಕ್ತಿಕ ಹಾಗೂ ಸಾಂಘಿಕ ಸಾಧನೆಗಳಿಂದ ಸಮಾಜ ಬಲವಾಗುತ್ತದೆ. ಒಗ್ಗಟ್ಟಿನಿಂದ ಬಾಳುವುದರಿಂದ ಎಲ್ಲರಿಗೂ ಸುರಕ್ಷತೆ ಹಾಗೂ ನ್ಯಾಯಗಳು ದೊರೆಯುತ್ತವೆ. ಜನರು ತಮ್ಮ ಹಾಗೂ ಸಮಾಜದ ಅಭಿವೃದ್ಧಿಯನ್ನು ಸಾಧಿಸಬಹುದು. ಇಂತಹ ಒಂದು ಸಾಮಾಜಿಕ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ಇದ್ದು, ವಿವಿಧ ಹಂತಗಳಲ್ಲಿ ಸುವ್ಯವಸ್ಥಿತವಾಗಿತ್ತು. ಕಾಲಕ್ಕೆ ತಕ್ಕಂತೆ ಸಾಮಾಜಿಕ ಪ್ರಗತಿ ಬದಲಾವಣೆಗಳು ಕಾಣಿಸಿಕೊಂಡವು. ಈ ಸಾಮಾಜಿಕ ವ್ಯವಸ್ಥೆಯು ಸಮಾಜದ ಅನೇಕ ಅಂಶಗಳನ್ನೊಳಗೊಂಡ ವಿಶಾಲ ವ್ಯಾಪ್ತಿಯುಳ್ಳ ವಿಷಯವಾಗಿದೆ. ಆದ ಕಾರಣ ಇಲ್ಲಿ ವರ್ಗ, ವರ್ಣ, ಜಾತಿ ವ್ಯವಸ್ಥೆ, ಮಹಿಳೆಯರ ಸ್ಥಾನಮಾನ, ಪ್ರಚಲಿತ ಆಚರಣೆಗಳು ಹೀಗೆ ಕೆಲವು ಪ್ರಮುಖ ವ್ಯವಸ್ಥೆಗಳನ್ನು ಕುರಿತು ಮಾತ್ರ ಅಧ್ಯಯನ ನಡೆಸಲಾಗಿದೆ.

**ವರ್ಗ, ವರ್ಣ, ಜಾತಿ:**

ಪ್ರಾಚೀನ ಕಾಲದಲ್ಲಿ ಹುಟ್ಟಿಕೊಂಡ ವರ್ಣ ವ್ಯವಸ್ಥೆ ಮೊದಲೋ, ಜಾತಿ ವ್ಯವಸ್ಥೆ ಮೊದಲೋ ಎನ್ನವುದಕ್ಕೆ ಅನೇಕ ಜಿಜ್ಞಾಸೆಗಳಿವೆ. ವೇದ ಕಾಲದಲ್ಲಿ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ಚತುವರ್ಣಗಳಲ್ಲಿ ವಿಭಜಿಸಿದ್ದನ್ನು ಪ್ರಾಚೀನ ದಾಖಲೆಯಾದ ಪುರುಷ ಸೂಕ್ತದಲ್ಲಿ ಕಾಣಬಹುದು. **"**ಪುರುಷ ಸೂಕ್ತದ ಕಾಲವನ್ನು ಅಥರ್ವಣ ವೇದ ಕಾಲದ ಕೊನೆಯ ಭಾಗವೆಂದು ವಿದ್ವಾಂಸರು ನಿರ್ಧರಿಸುತ್ತಾರೆ.**"**[9]

ಹೀಗೆ ವಿಭಜಿಸಿದ ವರ್ಣ ವ್ಯವಸ್ಥೆಯು ಬಿಗಿಯಾಗಿರದೆ. ವೃತ್ತಿಯನ್ನವಲಂಬಿಸಿತ್ತು. ಈ ವ್ಯವಸ್ಥೆಯು ಕಾಲಾನಂತರದಲ್ಲಿ ಬದಲಾವಣೆ ಹೊಂದುತ್ತಾ ಜ್ಯಾತಿವ್ಯವಸ್ಥೆಯಾಗಿ ಮಾರ್ಪಾಡಾದ ವಿಷಯವು ವೇದೋಪನಿಷತ್ತುಗಳಿಂದ ತಿಳಿದು ಬರುತ್ತದೆ.

***ಬ್ರಾಹ್ಮಣರು:***

"ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರು ಅತ್ಯಂತ ಪ್ರಾಭಾವಶಾಲಿಗಳಾಗಿದ್ದರು. ಜಾತಿಗಳಲ್ಲೆಲ್ಲಾ ಬಾಹ್ಮಣ ಜಾತಿಯೇ ಉತ್ತಮವಾದುದ್ದಾಗಿದೆ"[10] ಶಾಸನಗಳಲ್ಲಿ ಉಲ್ಲೇಖಿತರಾದ ಇವರು ಸಮಾಜದ ಇತರ ಮೂರು ವರ್ಗಗಳಿಗಿಂತ ಪೂಜ್ಯನೀಯರೆಂದು ತಿಳಿದುಬರುತ್ತದೆ. ಶಾಸನಗಳನ್ನು ಕೆಡಿಸಿದವರಿಗೆ ತಂದೆ, ತಾಯಿ, ಗುರು ಮತ್ತು ಬ್ರಾಹ್ಮಣರನ್ನು ಕೊಂದ ಪಾಪ ಬರುತ್ತದೆ ಎಂಬ ಶಾಸನ ಫಲಶೃತಿಯನ್ನು ನೋಡಿದರೆ ಅಂದು ಸಮಾಜದಲ್ಲಿ ಬ್ರಾಹ್ಮಣರಿಗಿದ್ದ ಸ್ಥಾನವನ್ನು ತಿಳಿಯಬಹುದಾಗಿದೆ.

ಬ್ರಾಹ್ಮಣರು ತಮ್ಮ ಜೀವಮಾನವೆಲ್ಲ ಅಧ್ಯಯನ, ಧ್ಯಾನ ಮತ್ತು ಯಜ್ಞದಲ್ಲಿ ನಿರತರಾಗಿರುತ್ತಿದ್ದರು ಮತ್ತು ದೇವಸ್ಥಾನಗಳ ಆಡಳಿತವೆಲ್ಲವೂ ಬ್ರಾಹ್ಮಣರಿಗೆ ಸಂಬಂಧಿಸಿದ್ದಾಗಿತ್ತು. ಬ್ರಾಹ್ಮಣರಿಗೆ ದಾನ ನೀಡುವುದು ಪುಣ್ಯದ ಕೆಲಸವೆಂದು ಅಂದಿನ ಜನತೆ ತಿಳಿದು ಊರುಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ದಾನ ಮಾಡುತ್ತಿದ್ದರು.

ಕಾಗಿನೆಲೆಯ ಶಾಸನವೊಂದು "ಸಾಸಿರ್ವೆದ ಪಾರಂಗರಪ್ಪ ಮಹಾಬ್ರಾಹ್ಮರ್ಗ್ಗ"[11] ಎಂದು ಎರಡನೆಯ ಜಯಸಿಂಹನು ಬ್ರಾಹ್ಮಣರಿಗೆ ದಾನ ಮಾಡಿದ್ದನ್ನು ಕುರಿತು ಹೇಳುತ್ತದೆ. ಅದೇ ಊರಿನ ಇನ್ನೊಂದು ಶಾಸನವು "ಕೆರೆಯ ಕೆಳಗೆ ಮಠದ 'ಹೆಗ್ಗಡೆ ಬಂಮಣಂಗೆ ಗದ್ದೆ, ಕಂಮ ಅಯ್ವತ್ತು"[12] ಎಂದು ಬ್ರಾಹ್ಮಣನಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆದ್ದರಿಂದ ಈ ಭಾಗದಲ್ಲಿ ಬ್ರಾಹ್ಮಣರಿಗೆ ಪೂಜ್ಯನೀಯ ಸ್ಥಾನವಿದ್ದು ಅವರಿಗೆ ರಾಜಾಶ್ರಯವು ದೊರೆತಿತ್ತೆಂದು ಹೇಳಬಹುದು.

***ಕ್ಷತ್ರೀಯರು:***

ಪುರುಷ ಸೂಕ್ತದಲ್ಲಿ ವಿವರಿಸಿದಂತೆ ಕ್ಷತ್ರೀಯರು ಸಮಾಜದಲ್ಲಿ ಬ್ರಾಹ್ಮಣರ ತರುವಾಯ ಪ್ರಮುಖ ಸ್ಥಾನವನ್ನು ಪಡೆದಿದ್ದರು. ರಾಜಕೀಯ ರಂಗದಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. ಧೈರ್ಯ, ಸಾಹಸ, ಶೌರ್ಯ, ತೇಜಸ್ಸು ಮುಂತಾದವು ಕ್ಷತ್ರೀಯರ ಸ್ವಾಭಾವಿಕ ಧರ್ಮಗಳಾಗಿದ್ದರಿಂದ ಆಡಳಿತ ನಡೆಸಲು ಹಾಗೂ ಯುದ್ಧ ಮಾಡಲು ಸಮರ್ಥರಾಗಿದ್ದರು. ದೇಶವನ್ನು ಸಂರಕ್ಷಿಸಿದ ಹಿರಿಮೆ ಕ್ಷತ್ರೀಯರದ್ದಾಗಿದೆ. ಇವರನ್ನು ಆಡಳಿತ ವರ್ಗದ ಜನರೆಂದು ಹೇಳಲಾಗುವುದು.

ಒಂದು ಸೀಮಿತ ಪ್ರದೇಶ ಅಥವಾ ರಾಜ್ಯವನ್ನು ಆಂತರಿಕ ಹಾಗೂ ಬಾಹ್ಯ ಗಂಡಾಂತರ ಸಮಸ್ಯೆಗಳಿಂದ ರಕ್ಷಿಸುವುದು ಕ್ಷತ್ರೀಯರ ಆದ್ಯ ಕರ್ತವ್ಯವಾಗಿತ್ತು. ಕರ್ನಾಟಕದಲ್ಲಿ ಆಳಿದ ರಾಜಮನೆತನಗಳಲ್ಲಿ ಹೆಚ್ಚಿನವರು ಕ್ಷತ್ರೀಯರಾಗಿದ್ದಾರೆ. ಕಾಗಿನೆಲೆಯ ಶಾಸನವು "ಶ್ರೀಮದ್ದಂಡನಾಯಕಂ ವಡ್ಡರಾವುಳದದಿಷ್ಠಾಯಕಂ ಮಲ್ಲರಸರು ವಡ್ಡರಾವುಳದ ಸಂಕದೊಳಗವೊಂದು ಲಖ್ಖಡಕೆಯ ಸುಂಕಮಂ ದೇವರ ನಿವೇದ್ಯಕ್ಕೆ ಕೊಟ್ಟರು"[13] ಎಂದು, ಕಾಗಿನೆಲೆಯ ಇನ್ನೊಂದು ಶಾಸನ "ಶ್ರೀ ಮನ್ಮಹಾಮಂಡಳೇಶ್ವರಂ ಬರ್ಮದೇವನುಂ"[14] ಎಂದು ತಿಳಿಸುವುದು.

ಕಾಗಿನೆಲೆಯ ಶಾಸನ "ಜಕ್ಕಗಾವುಂಡನು ಗ್ರಾಮೇಶ್ವರ ದೇವರ ಆರಾಧನೆಗಾಗಿ ಮತ್ತು ವಿದ್ಯಾರ್ಥಿಗಳ ಶಿಕ್ಷಣದ ಪೋಷಣೆಗಾಗಿ ಭೂದಾನವನ್ನು ದಂಡನಾಯಕ ಅಪ್ಪಚ್ಚಯ್ಯನ ಸಾಕ್ಷಿಯಾಗಿ ದೇವಾಲಯದ ಸದ್ಯೋಜಾತ ಪಂಡಿತನಿಗೆ ಒಪ್ಪಿಸಿದ್ದನ್ನು"[15] ಕುರಿತು ತಿಳಿಸುತ್ತದೆ. ಇದರಿಂದ ಕೇವಲ ಧಾರ್ಮಿಕ ಕ್ಷೇತ್ರಗಳಿಗೆ ಮಾತ್ರ ಧಾನ–ಧರ್ಮಗಳನ್ನು ನೀಡದೇ ಶೈಕ್ಷಣಿಕ ರಂಗಕ್ಕೂ ಧಾನ ಮಾಡಿದ ಉಲ್ಲೇಖ ಈ ಶಾಸನದಿಂದ ತಿಳಿದು ಬರುತ್ತದೆ.

ಈ ರೀತಿಯಾಗಿ ದೇವಾಲಯಗಳಿಗೆ, ಮಠಗಳಿಗೆ, ಪ್ರಾಚೀನ ಕಾಲದ ಶಿಕ್ಷಣ ಸಂಸ್ಥೆಗಳಿಗೆ ಭೂಮಿಯನ್ನು ಅಥವಾ ಹಣವನ್ನು ಕಾಣಿಕೆಯಾಗಿ ಕೊಟ್ಟಿದ್ದನ್ನು ಶಾಸನಗಳು ತಿಳಿಸುತ್ತವೆ. ಅಲ್ಲದೆ ಮಹಾಮಂಡಳೇಶ್ವರ, ದಂಡನಾಯಕ ಮುಂತಾದ

ಅನೇಕ ಅಧಿಕಾರಿಗಳ ಹೆಸರುಗಳು ಕಂಡು ಬರುತ್ತವೆ. ಈ ಅಂಶಗಳಿಂದಾಗಿ ಪ್ರಸ್ತುತ ಕ್ಷೇತ್ರದಲ್ಲಿ ಕ್ಷತ್ರೀಯರು ಇದ್ದರೆಂದು ಹೇಳಬಹುದು.

***ವೈಶ್ಯರು:***

ವೈಶ್ಯರು ಸಮಾಜದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರೀಯರ ನಂತರದ ಸ್ಥಾನವನ್ನು ಪಡೆದಿದ್ದರು. ಇವರ ಪ್ರಮುಖ ಉದ್ಯೋಗ ವ್ಯಾಪಾರವಾಗಿತ್ತು. ಇದಲ್ಲದೆ ಇವರು ಕೃಷಿಯಲ್ಲಿ ತೊಡಗುತ್ತಿದ್ದರು. ಪ್ರಸ್ತುತ ಅಧ್ಯಯನ ಕ್ರೇತ್ರದ ಶಾಸನಗಳಲ್ಲಿ ಇವರು ಶೆಟ್ಟಿಗರು, ಬಣಜಿಗರು ಮುಂತಾದ ಹೆಸರುಗಳಿಂದ ಉಲ್ಲೇಖಿತಗೊಂಡಿದ್ದಾರೆ. ಕ್ರಿ.ಶ 1122 ರ ಕಾಗಿನೆಲೆ ಶಾಸನವು[16] **"**ಕಾಳಿಶೆಟ್ಟಿಯು ಶಿವದೇವಾಲಯ(ಬ್ರಹ್ಮೇಶ್ವರ) ಮತ್ತು ನೀರಿನ ತಟಾಕಗಳನ್ನು ನಿರ್ಮಾಣ ಮಾಡಿಸಿದ್ದನ್ನು ತಿಳಿಸುತ್ತದೆ.**"**

ಕಾಗಿನೆಲೆಯ ಇನ್ನೊಂದು ಶಾಸನದಲ್ಲಿ[17] **"**ದೇವಿಶೆಟ್ಟಿ ಮತ್ತು ದಾಸಿಸೆಟ್ಟಿಯು ಗ್ರಾಮೇಶ್ವರ ದೇವರ ದೀಪ, ಧೂಪ, ನೈವೇದ್ಯ, ಜೀರ್ಣೋದ್ದಾರಕ್ಕೆ ಮತ್ತು ವಿದ್ಯಾರ್ಥಿಗಳ ಶಿಕ್ಷಣದ ಪೋಷಣೆಗಾಗಿ ದಾನ ಮಾಡಿದ್ದನ್ನು ತಿಳಿಸುತ್ತದೆ.**"**

ಈ ರೀತಿಯಾಗಿ ಶಾಸನಗಳಲ್ಲಿ ಶೆಟ್ಟಿಯರು ಉಲ್ಲೇಖಗೊಂಡಿದ್ದರಿಂದ ವೈಶ್ಯರು ಈ ನಾಡಿನ ಪ್ರಮುಖ ಸಾಮಾಜಿಕ ವರ್ಗವಾಗಿತ್ತೆಂದು ತಿಳಿದುಬರುತ್ತದೆ.

***ಶೂದ್ರರು:***

ಶೂದ್ರರು ಸಮಾಜದಲ್ಲಿ ನಾಲ್ಕನೆಯ ವರ್ಗಕ್ಕೆ ಸೇರಿದವರಾಗಿದ್ದರು. ಇವರು ಸಮಾಜದಲ್ಲಿನ ಮೇಲಿನ ವರ್ಗದವರಾದ ಬ್ರಾಹ್ಮಣ, ಕ್ಷತ್ರೀಯ ಮತ್ತು ವೈಶ್ಯರ ಸೇವೆಯನ್ನು ಮಾಡುವವರು. ಈ ವರ್ಗಕ್ಕೆ ಸೇರಿದವರು ಹೆಚ್ಚಾಗಿ ಇನ್ನೊಬ್ಬರ ಆಶ್ರಯದಲ್ಲಿರುವುದರಿಂದ ಇವರಿಗೆ ಸ್ವತಂತ್ರವಾದ ಆಸ್ತಿ ಅಥವಾ ಅಂತಸ್ತು ಇರುತ್ತಿದ್ದಿಲ್ಲವೆಂದು ಹೇಳಬಹುದು. ಅರಮನೆಯಲ್ಲಿ ಗೋವುಗಳನ್ನು ಕಾಯುವುದು ಮತ್ತು ಅವುಗಳ ಸಂರಕ್ಷಣೆ ಮಾಡುವುದು ಮುಂತಾದವು ಇವರ ಕರ್ತವ್ಯಗಳಾಗಿದ್ದವು. ಈ ರೀತಿಯಾಗಿ ಶೂದ್ರರು ಇತರರ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಾ ಸಮಾಜ ಸೇವೆಯನ್ನು ಮಾಡುವುದರಲ್ಲಿಯೇ ತೃಪ್ತಿಯನ್ನು ಕಾಣುತ್ತಿದ್ದರು. ಈ ಕ್ಷೇತ್ರದ ಶಾಸನಗಳಲ್ಲಿ ಶೂದ್ರರ ಉಲ್ಲೇಖ ಅತಿ ವಿರಳ.

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಬ್ರಾಹ್ಮಣ, ಕ್ಷತ್ರೀಯ, ವೈಶ್ಯರು ಮತ್ತು ಶೂದ್ರರಲ್ಲದೇ ಇತರೆ ವೃತ್ತಿ ಆಧಾರಿತ ಜಾತಿಗಳಾದ ಬಡಿಗರು, ಕಮ್ಮಾರರು, ಕಲ್ಲುಟಿಗರು ಅಥವಾ ವಡ್ಡರು ಮುಂತಾದವರು ಇದ್ದುದಾಗಿ ತಿಳಿದು ಬರುತ್ತದೆ. ಕ್ರಿ.ಶ 1121 ರ ಕಾಗಿನೆಲೆಯ ಶಾಸನವು **"**ರೂವಾರಿ ಸಿಂಗೋಜಂಗೆ ಗದ್ದೆ ಕಮ್ಮ ಆಯ್ವತ್ತು ಹಕ್ಕಲು ಮತ್ತಲ್ದೆಂದು ದೇವಂಗಟ್ಟದ ಕೆರೆಯ ತೆಂಕಲು .......**"**[18] ಎಂದು ಉಲ್ಲೇಖವನ್ನು ಹೊಂದಿದೆ. ಕಾಗಿನೆಲೆಯ ಇನ್ನೊಂದು ಶಾಸನವು **"**ರೂವಾರಿ ಚಾವ ಛಾತ್ರಂ ರೂವಾರಿ ಕೊಮ್ಮಂ ಬಿರುದ ರೂವಾರಿ ಭೈರವಂ**"**[19] ಎಂದು ತಿಳಿಸುವುದು.

ಹೀಗೆ ಕಾಗಿನೆಲೆಯ ಶಾಸನಗಳು ಮತ್ತು ಗ್ರಾಂಥಿಕ ಸಾಹಿತ್ಯಗಳು ವೃತ್ತಿ ಆಧಾರಿತ ಇತರ ಜಾತಿಗಳು ಇದ್ದವೆಂಬುದನ್ನು ತಿಳಿಸುತ್ತವೆ.

**ಸ್ತ್ರೀಯರ ಸ್ಥಾನಮಾನ:**

ಭಾರತದಲ್ಲಿ ಸ್ತ್ರೀಯರ ಸ್ಥಾನಮಾನವು ಪ್ರಾಚೀನ ಕಾಲದಿಂದಲೂ ಏಳುಬೀಳುಗಳನ್ನು ಅನುಭವಿಸುತ್ತ ಬಂದಿದೆ. **"**ಮಾತೃ ದೇವತೆಗಳ ಪೂಜೆ ನಡೆಯುತ್ತಿದ್ದ ಹಾಗೂ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದ ಸಿಂಧೂ ನದಿ ತೀರದ ಸಂಸ್ಕೃತಿಯಲ್ಲಿಯೂ, ವೇದಗಳ ಕಾಲದಲ್ಲಿಯೂ ಮಹಿಳೆಯರು ಉನ್ನತ ಸ್ಥಾನಮಾನ ಹೊಂದಿದ್ದರು.**"**[20] ಅಂದು ಸ್ತ್ರೀಯರು ಪುರುಷರಂತೆ ಶಿಕ್ಷಣಕ್ಕೆ ಅರ್ಹರಾಗಿದ್ದರು. ಋಗ್ವೇದದ ಕಾಲದಲ್ಲಿ ಸ್ತ್ರೀಯರಿಗಿದ್ದ ಗೌರವ ಮತ್ತು ಸ್ವಾತಂತ್ರ್ಯಗಳು ಉತ್ತರ ವೇದಕಾಲದಿಂದೀಚೆಗೆ ಬಂದಿರುವಂತವು.

ಪ್ರಸ್ತುತ ಕ್ಷೇತ್ರದ ಶಾಸನದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ಕುರಿತು ತಿಳಿಸಲಾಗಿದೆ. ಕಾಗಿನೆಲೆಯ ಕ್ರಿ.ಶ 1121 ರ ಶಾಸನವೊಂದು "ಕಾಳಿಸೆಟ್ಟಿಯ ಹೆಂಡತಿ ಕೆಂಚವ್ವೆಯ ಪತಿಭಕ್ತಿಯನ್ನು ಕುರಿತು ತಿಳಿಸುತ್ತದೆ."[21] ಇದನ್ನು ನೋಡಿದಾಗ ಸ್ತ್ರೀಯರು ಸಮಾಜದಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಹೊಂದಿದ್ದರೆಂದು ಹೇಳಬಹುದು.

***ದೇವಾಲಯದ ಸೂಳೆಯರು:***

ವೇಶ್ಯಾ ಪದ್ಧತಿಯು ಸಮಾಜದಲ್ಲಿ ಗೃಹಿಣಿ ಸಮಾಜದ ಜೊತೆಗೆ ಬೆಳೆದು ಬಂದಿತು. ಇದು ಪುರಾತನ ಕಾಲದಿಂದಲೂ ಬೆಳೆದು ಬಂದಿರುವ ಪದ್ಧತಿಯಾಗಿದೆ. ವೇಶ್ಯಯರನ್ನು ಶಾಸನಗಳಲ್ಲಿ ಸೂಳೆಯರೆಂದು ಕರೆಯಲಾಗಿದೆ. ಇಂತಹ ಸೂಳೆಯರು ಜೀವನೋಪಾಯಕ್ಕಾಗಿ ಭೂಮಿಯನ್ನು ದತ್ತಿ ಬಿಡುತ್ತಿದ್ದರು.

ಈ ದತ್ತಿಯ ಬಗೆಗೆ ಕಾಗಿನೆಲೆಯ ಕ್ರಿ.ಶ 1121 ರ ಶಾಸನದಲ್ಲಿ "ಶ್ರೀ ಮತ್ಕಾಳೇಶ್ವರ ದೇವರಂಗಭೋಗಕ್ಕೆ ಧೂಪ–ದೀಪ ನೈವೇದ್ಯೇಕ್ಕೆ ತಪೋಧನರಾಹಾರ.........ಕಂಬದ ಸೂಳೆಯರ್ಗಂ ಸ್ವಸ್ತಿಯಮ ..........ಧಾರಣಮೋ(ನಾನುಷ್ಠ) ನಜಪಸಮಾಧೀಶೀಳಸಂಪನ್ನರಪ್ಪ ಶ್ರೀ ಮತು ಲೋಕಾಭರಣ ಪಣ್ಡಿತರ........ರಾಪೂರ್ವ್ವಕಂ ಮಾಡಿಕೊಟ್ಟ"[22] ಎಂದು ಉಲ್ಲೇಖವಾಗಿದೆ.

ಡಾ. ಚೆನ್ನಕ್ಕ ಯಲಿಗಾರರವರು 'ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ' ದಲ್ಲಿ "ಸೂಳೆಯರನ್ನು ವ್ಯಕ್ತಿಸೂಳೆ, ದೇವಸೂಳೆ ಮತ್ತು ಸಮಾಜಸೂಳೆ ಎಂದು ವಿಂಗಡಿಸಿದ್ದಾರೆ. ಈ ಕ್ಷೇತ್ರದ ಶಾಸನಗಳು ಕಂಬದ ಸೂಳೆಯರನ್ನು ಹೆಸರಿಸುತ್ತವೆ. ಈ ಕಂಬದ ಸೂಳೆಯರು ರಂಗಭೋಗದ ಸೂಳೆಯರಲ್ಲಿ ಮಹತ್ವ ಪಡೆದವರಾಗಿರಬೇಕು. ಕಂಬದ ಸೂಳೆಯರೆಂದರೆ ದೇವಸ್ಥಾನದ ರಂಗಮಂಟಪದ ಅಲಂಕಾರಕ್ಕೋಸ್ಕರ ಅಲ್ಲಿಯ ಕಂಬಗಳ ಹತ್ತಿರ ಒಬ್ಬೊಬ್ಬರು ಪೂಜೆ ಮುಗಿಯುವವರೆಗೆ ಅಲಂಕಾರ ಮಾಡಿಕೊಂಡು ನಿಲ್ಲುವುದು ಇವರ ಕಾರ್ಯವಾಗಿರಬೇಕು"[23] ಎಂದು ಊಹಿಸಿದ ಡಾ. ಚೆನ್ನಕ್ಕ ಯಲಿಗಾರರವರ ಊಹೆ ಸಮರ್ಪಕವೆನಿವುದು.

ಕಂಬದ ಸೂಳೆಯರನ್ನು ಶಾಸನಗಳು ಉಲ್ಲೇಖಿಸಿರುವುದನ್ನು ಕಾಣಬಹುದು. ಕ್ರಿ.ಶ 1121 ರ ಕಾಗಿನೆಲೆಯ[24] ಶಾಸನವೊಂದು ತಿಳಿಸುವಂತೆ 'ಬಮ್ಮಗಾವುಂಡನು ಕಾಳೇಶ್ವರ ದೇವರಿಗೆ ಧೂಪ, ದೀಪ, ನೈವೇದ್ಯ ಮತ್ತು ಕಂಬದ ಸೂಳೆಯರಿಗೆ ಗದ್ದೆ, ಹೂದೋಟವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.'

"ದೇವಸ್ಥಾನದ ಕಾರ್ಯಕಲಾಪಗಳಿಗೆ ಅನುಕೂಲವಾಗಲೆಂದು ಅದರ ಸುತ್ತ ಗಾಯಕರು, ಸೂಳೆಯರು ಮೊದಲಾದವರ ವಾಸಸ್ಥಳಗಳನ್ನು ನಿರ್ಮಿಸುತ್ತಿದ್ದರು"[25] ಕ್ರಿ.ಶ 1121 ರ ಕಾಗಿನೆಲೆಯ ಶಾಸನದಲ್ಲಿ "ತರುಣ ಕುರಂಗ ಲೋಚನೆಯರಿರ್ಕ್ಕೆಯಿನೊಪ್ಪುವ ಸೂಳೆಗೆರೆ"[26] ಎಂಬ ಉಲ್ಲೇಖವು ಬರುವುದು.

ಈ ಮೇಲಿನ ಶಾಸನೋಕ್ತಿಗಳಿಂದ ವೇಶ್ಯಾಪದ್ಧತಿ ಪ್ರಸ್ತುತ ಕ್ಷೇತ್ರದ ಸಮಾಜದಲ್ಲಿ ಪ್ರಚಲಿತವಿದ್ದುದು ತಿಳಿದು ಬರುತ್ತದೆ. ಅಂದಿನ ಸಮಾಜದಲ್ಲಿ ಅವರಿಗೆ ಸ್ಥಾನಮಾನವನ್ನು ಕಲ್ಪಿಸಿಕೊಡಲಾಗಿತ್ತೆಂದು ಹೇಳಬಹುದು.

**ಸಾರ್ವಜನಿಕ ಚಟುವಟಿಕೆಗಳು:**

ಧರ್ಮ ಮಾರ್ಗಗಳನ್ನು ಅನುಸರಿಸುವುದರ ಮೂಲಕ ಸದ್ಗತಿಯನ್ನು ಸಂಪಾದಿಸಿಕೊಳ್ಳಬಹುದೆಂದು ನಮ್ಮ ಪ್ರಾಚೀನರು ನಂಬಿದ್ದರು. ಅಂತೆಯೇ ಅವರು ಈ ಕ್ಷೇತ್ರದಲ್ಲಿ ಕೆರೆಗಳು, ಬಾವಿ, ದೇವಾಲಯಗಳನ್ನು ಕಟ್ಟಿಸಿದ ಮತ್ತು ದೇವಾಲಯಗಳಿಗೆ ದತ್ತಿ ಬಿಟ್ಟ ವಿಷಯವನ್ನು ಹಲವು ಶಾಸನಗಳಲ್ಲಿ ಉಲ್ಲೇಖ ದೊರೆಯುವುದು.

ಕಾಗಿನೆಲೆಯ ಶಾಸನವು27 'ಜಕ್ಕಗಾವುಂಡನು ಗ್ರಾಮೇಶ್ವರ ದೇವರ ಆರಾಧನೆ ಮತ್ತು ವಿದ್ಯಾರ್ಥಿಗಳ ಶಿಕ್ಷಣದ ಪೋಷಣೆಗಾಗಿ ಭೂಮಿಯನ್ನು ದಾನ ಮಾಡಿದ್ದನ್ನು ಹಾಗೂ ಇನ್ನೊಂದು ಕಾಗಿನೆಲೆಯ

ಶಾಸನವು28 'ಕಾಳಿಸೆಟ್ಟಿಯ ಶಿವದೇವಾಲಯ ಮತ್ತು ನೀರಿನ ತಟಾಕಗಳನ್ನು ನಿರ್ಮಾಣಮಾಡಿದ್ದನ್ನು, ನಂತರ ಕಾಳಗಾವುಂಡನು ಬ್ರಹ್ಮೇಶ್ವರ ದೇವರ ನೈವೇದ್ಯ, ಜೀರ್ಣೋದ್ದಾರಕ್ಕಾಗಿ ಗದ್ದೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತವೆ.'

ಹೀಗೆ ಪ್ರಸ್ತುತ ಕ್ಷೇತ್ರದ ಶಾಸನಗಳು ದೇವಾಲಯಕ್ಕೆ ಮತ್ತು ಶಿಕ್ಷಣಕ್ಕೆ ದಾನ ಮಾಡಿದ್ದನ್ನು ತಿಳಿಸುತ್ತವೆ.

***ವಿದ್ಯಾ ಕೇಂದ್ರಗಳು:***

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಮುಖ ವಿದ್ಯಾಕೇಂದ್ರಗಳಾಗಿ ಮಠಗಳು, ಅಗ್ರಹಾರಗಳು, ಘಟಿಕಾಸ್ಥಾನಗಳು ಕಂಡು ಬರುತ್ತವೆ. ಪ್ರಸ್ತುತ ಕ್ಷೇತ್ರದ ಶಾಸನದಲ್ಲಿ ಇಂತಹ ವಿದ್ಯಾಕೇಂದ್ರದ ಬಗ್ಗೆ ಉಲ್ಲೇಖವಿದೆ.

***ಮಠಗಳು:***

ಮಠಗಳು ಸಾಮಾನ್ಯವಾಗಿ ದೇವಾಲಯಗಳಿಗೆ ಹೊಂದಿಕೊಂಡು ಇರುತ್ತಿದ್ದವು. ದೇವಾಲಯದ ಮುಖ್ಯಸ್ಥನೇ ಅದರ ಮುಖ್ಯಸ್ಥನಾಗಿರುತ್ತಿದ್ದನು. ಮಧ್ಯಕಾಲೀನ ಭಾರತದಲ್ಲಿ ಕಾಳಾಮುಖ ಶೈವಮಠಗಳು ಪ್ರಸಿದ್ಧ ವಿದ್ಯಾಕೇಂದ್ರಗಳಾಗಿದ್ದವೆಂದು ತಿಳಿದು ಬರುತ್ತವೆ. ಚಾಲುಕ್ಯ ಎರಡನೆ ಜಯಸಿಂಹನ ಕಾಲದ ಕಾಗಿನೆಲೆ ಶಾಸನವು[28] ವಿದ್ಯಾದಾನಕ್ಕಾಗಿ ಮಠಕ್ಕೆ ಗದ್ದೆಯನ್ನು ದತ್ತಿ ಬಿಟ್ಟಿದ್ದನ್ನು ಕುರಿತು ತಿಳಿಸುವುದು.

ಒಟ್ಟಾರೆಯಾಗಿ ಕರ್ನಾಟಕವು ತನ್ನದೇಯಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ರಾಜ್ಯವಾಗಿದ್ದು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ಯಾದವರು ಮತ್ತು ವಿಜಯನಗರ ಅರಸರು ಜೊತೆಗೆ ಅನೇಕ ಸಾಮಂತ ಅರಸು ಮನೆತನಗಳು ಆಳ್ವಿಕೆ ಮಾಡಿರುವ ಬಗ್ಗೆ ಅನೇಕ ಆಧಾರಗಳು ದೊರೆಯುತ್ತವೆ.

**ಕೊನೆಟಿಪ್ಪಣಿಗಳು**

1. ಜೋಶಿ.ಡಿ.ಟಿ, 'ಪ್ರಾಚೀನ ಭಾರತದ ಇತಿಹಾಸ' ಗದಗ, 1995, ಪು–187.
2. SII, XVIII. ನಂ. 53 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
3. SII, XVIII. ನಂ. 76 ಕ್ರಿ.ಶ 1072 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
4. SII, XVIII. ನಂ. 117 ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
5. SII, XVIII. ನಂ. 226 ಕ್ರಿ.ಶ 1246–47 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
6. SII, XVIII. ನಂ. 259 ಕ್ರಿ.ಶ 1282 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
7. ಡಾ.ಚೆನ್ನಕ್ಕ. ಪಾವಟೆ 'ಶಾಸನ ಸಂಜೀವಿನಿ' ಧಾರವಾಡ 2003 ಪು.44
8. SII, XVIII. ನಂ. 117 ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
9. ಡಾ.ಭೋಜರಾಜ.ಪಾಟೀಲ. 'ನಾಗರಖಂಡ–70: ಒಂದು ಅಧ್ಯಯನ' ಆನಂದಪುರಂ, 1995, ಪು–154
10. ಚಿದಾನಂದಮೂರ್ತಿ.ಎಂ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಮೈಸೂರು, 1966, ಪು–481
11. SII, XVIII. ನಂ. 53 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
12. SII, XVIII. ನಂ. 117, ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
13. SII, XVIII. ನಂ. 120 ಕ್ರಿ.ಶ 1122 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
14. SII, XVIII. ನಂ. 76 ಕ್ರಿ.ಶ 1072 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)

15. SII, XVIII. ನಂ. 76 ಕ್ರಿ.ಶ 1072 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
16. SII, XVIII. ನಂ. 120 ಕ್ರಿ.ಶ 1122 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
17. SII, XVIII. ನಂ. 76 ಕ್ರಿ.ಶ 1072 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
18. SII, XVIII. ನಂ. 117, ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
19. SII, XVIII. ನಂ. 117, ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
20. ಡಾ.ಭೋಜರಾಜ. ಪಾಟೀಲ 'ನಾಗರಖಂಡ–70 ಒಂದು ಅಧ್ಯಯನ' ಆನಂದಪುರಂ, 1995, ಪು.160–161
21. SII, XVIII. ನಂ. 120 ಕ್ರಿ.ಶ 1122 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
22. SII, XVIII. ನಂ. 120 ಕ್ರಿ.ಶ 1122 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
23. ಡಾ.ಚೆನ್ನಕ್ಕ. ಯಲಿಗಾರ, 'ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ' ಧಾರವಾಡ, 1990, ಪು–47
24. SII, XVIII. ನಂ. 117, ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
25. ಡಾ.ಚೆನ್ನಕ್ಕ. ಯಲಿಗಾರ, 'ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ' ಧಾರವಾಡ, 1990, ಪು–67
26. SII, XVIII. ನಂ. 117, ಕ್ರಿ.ಶ 1121 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
27. SII, XVIII. ನಂ. 76 ಕ್ರಿ.ಶ 1072 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)
28. SII, XVIII. ನಂ. 120 ಕ್ರಿ.ಶ 1122 ಕಾಗಿನೆಲೆ, ಬ್ಯಾಡಗಿ(ತಾ) ಹಾವೇರಿ(ಜಿ)

**ಆಕರ ಗ್ರಂಥಗಳು**


- ಚಿದಾನಂದ ಮೂರ್ತಿ. ಎಂ. (1966). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಮೈಸೂರು.
- ಚೆನ್ನಕ್ಕ ಪಾವಟೆ. (1990). *ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ.* ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ.
- ಚೆನ್ನಕ್ಕ ಪಾವಟೆ. (2003). *ಶಾಸನ ಸಂಜೀವಿನಿ.* ಚೆನ್ನಗಂಗಾ ಪ್ರಕಾಶನ.
- ಹಿರೇಮಠ, ಆರ್.ಸಿ., ಕಲಬುರ್ಗಿ, ಎಂ.ಎಂ. (1995). *ಕನ್ನಡ ಶಾಸನ ಸಂಪದ.* ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ.
- ಕಲಬುರ್ಗಿ, ಎಂ.ಎಂ. (1978). *ಶಾಸನಗಳಲ್ಲಿ ಶಿವಶರಣರು.* ವೀರಶೈವ ಅಧ್ಯಯನ ಸಂಸ್ಥೆ.
- ಪಾಟೀಲ ಭೋಜರಾಜ. (1995). *ನಾಗರಖಂಡ–70 ಒಂದು ಅಧ್ಯಯನ.* ಆನಂದಪುರಂ.